relevant portions of the report would be furnished;

(*c*) the action that the Government proposed to take in these cases ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) & (*c*) The report of the Committee is awaited.

ಶ್ರೀ ವಿ. ಮಸಿಯಪ್ಪ.—ಈ ಸಮಿತಿಯವರು investigation ನಡೆಸಿ ಆ ಬಗ್ಗೆ ಉಗ್ರಕಾರ್ಯಕ್ರಮ ಕೈಕೊಳ್ಳಲು authorise ಮಾಡಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಆ ರೀತಿ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಶ್ರೀ ವಿ. ಮಸಿಯಪ್ಪ.—ಇದೇ ರೀತಿ ಬರಾಳ್ಳ ಸಮುದ್ರ ಕೆರೆ ಒಡೆದು ಹೋಗಿರುವ ವಿಚಾರವನ್ನು ತನಿಖೆ ಮಾಡುವ ಅವಶ್ಯಕತೆ ಸರ್ಕಾರಕ್ಕೆ ಕಂಡುಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನಾವ ಕೆರೆಯ ವಿಚಾರದಲ್ಲಿಯೂ ಸದ್ಯಕ್ಕೆ ಅವಶ್ಯಕತೆ ಕಂಡುಬಂದಿಲ್ಲ ಎಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಬಿ. ಎಂ. ಶೀನಪ್ಪ.—ಈ ಕೆರೆಗಳು ಒಡೆದು ಹೋಗಿರುವುದರ ದೆಶೆಯಿಂದ ನಷ್ಟವಾಗಿರುವ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಸಮಿತಿಯವರು ವರದಿ ಕಳುಹಿಸಿದ ನಂತರ ಆ ವಿಚಾರ ಗೊತ್ತಾಗುತ್ತದೆ.

Anecut for Bheema River near Dalavoy.

Q.—277. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that an anecut has been proposed for Bheema River (Chikkakere) near Dalavoy Kodihalli, Malavalli Taluk;

(*b*) if so, what is the estimated cost and the area that can be irrigated; and

(*c*) the stage at which records stand ?

A.—Sri KADIDAL MANJAPPA (Minister for Revenue and Public Works).—

(*a*) No.

(*b*) & (*c*) Do not arise in view of reply to (*a*).

ಶ್ರೀ ಎಂ. ಚಿಕ್ಕಲಿಂಗಯ್ಯ.—ಬಹುಶಃ ನಾನು ಅಣೆಕಟ್ಟು ಎಂದು ಕೇಳಿರುವುದರಿಂದ ತಾವು "ಇಲ್ಲ" ಎಂಬುದಾಗಿ ಜವಾಬು ಕೊಟ್ಟಿರಬಹುದು. ಅದು ಒಂದು ರಿಜರ್ವಾಯರ್ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಲ್ಲ; ತಾವು ದಳವಾಯಿ ಹತ್ತಿರ ಎಂದು ಹೇಳ್ದಿದೀರಿ. ಅಲ್ಲಿ ಯಾವ ರಿಜರ್ವಾಯರ್ ಸಹ ಇಲ್ಲ. ಹಲಗೂರು ಹತ್ತಿರ ಕಟ್ಟ ಬೇಕೆಂಬ ಬಗ್ಗೆ ಆರ್ಡರಾಗಿತ್ತು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದನ್ನು ಈಗ ಕೈಬಿಟ್ಟಿರುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಅದು ಇನ್ನೂ ಪುನಃಪರಿಶೀಲನೆಯಲ್ಲಿದೆ.

Expenditure on Anti-corruption and Cultural Development Departments.

Q.—428. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) the total expenditure incurred for the establishment and maintenance of the Departments of (i) Anti-corruption, (ii) Cultural Development in Mysore from their inception;

(*b*) the total amount of savings or gains got by the Government by the efficient working of the Anti-corruption Department in Mysore ?

A.—Sri KADIDAL MANJAPPA (Minister for Revenue and Public Works).—

(*a*) (i) Anti-corruption Department: Rs. 9,26,584.

(ii) Cultural and Literary Development in Mysore : Rs. 17,048.

(*b*) The work of the Department is not reflected only in savings or gains in money.

ಶ್ರೀ ಕೆ. ಪ್ರಭಾಕರ್.—ಸರ್ಕಾರದವರು ಈ ವಿಚಾರವನ್ನು ಲಾಭದೃಷ್ಟಿಯಿಂದ ಪರಿಗಣಿಸಿಲ್ಲವೆಂದು ಹೇಳಿದ್ದೀರಿ. ಈ ಡಿಪಾರ್ಟ್‌ಮೆಂಟಿನಿಂದ ಸರ್ಕಾರಕ್ಕೆ ಆಗಿರುವ savings ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—Savings ಎಂಬುದು indirect ಆಗಿ ಬಹಳ ಆಗಿದೆ. ಉದಾಹರಣೆಗೆ, ಕೆಲವು ಕಡೆ leakages ಆಗುತ್ತಿರುವುದು ಪತ್ತೆಯಾಗಿ ಅವುಗಳು ಸರ್ಕಾರದ ಗಮನಕ್ಕೆ ಬಂದಿವೆ. ಒಂದು ಸಂದರ್ಭದಲ್ಲಿ 80 ಸಾವಿರ ರೂಪಾಯಿಗಳ leakages, ಇನ್ನೊಂದು ಸಂದರ್ಭದಲ್ಲಿ 7,44,000 ರೂಪಾಯಿಗಳ leakages ಆಗುತ್ತಿದ್ದುದು ಗೊತ್ತಾಗಿ, ಈ ಮೂಲಕ ಅಪ್ರತ್ಯಕ್ಷ ಪ್ರಯೋಜನ ಸರ್ಕಾರಕ್ಕೆ ದೊರೆತಿದೆ.

Estimates Committee recommendations.

Q.—432. Sri K. PRABHAKAR (Nelamangala—Scheduled Castes).—

Will the Government be pleased to state :—